# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | ಶ್ರೀ ಶಶೀಲ್ ಜಿ ನಮೋಶಿ<br>(ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 193 (1578) |
| ಉತ್ತರಿಸಬೇಕಾದ ದಿನಾಂಕ | 21.03.2025 |
| **ಪ್ರಶ್ನೆಗಳು** | **ಉತ್ತರಗಳು** |
| ಅ) ರಾಯಚೂರು ಜಿಲ್ಲೆಯ ಸಿರವಾರ ತಾಲ್ಲೂಕಿನ ಅತ್ತನೂರು ಗ್ರಾಮಕ್ಕೆ ಕುಡಿಯುವ ನೀರು ಒದಗಿಸಲು ಸರ್ಕಾರದ ಕೈಗೊಂಡ ಕ್ರಮಗಳೇನು; ಅತ್ತನೂರು ಗ್ರಾಮಕ್ಕೆ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯಡಿ ಕಾಮಗಾರಿ ಕೈಗೆತ್ತಿಕೊಂಡಿದೆಯೇ; ಸದರಿ ಕಾಮಗಾರಿಯು ಪ್ರಸ್ತುತ ಯಾವ ಹಂತದಲ್ಲಿದೆ; (ಸಂಪೂರ್ಣ ವಿವರಣೆ ನೀಡುವುದು) | ಪ್ರಸ್ತುತ ಸಿರವಾರ ತಾಲ್ಲೂಕಿನ ಅತ್ತನೂರು ಗ್ರಾಮಕ್ಕೆ ಹಾಲಿ ಇರುವ ಏಕ ಗ್ರಾಮ ಯೋಜನೆಯಿಂದ ನೀರನ್ನು ಒದಗಿಸಲಾಗುತ್ತಿದೆ.<br><br>ಮುಂದುವರೆದು, ರಾಜೀವ್ ಗಾಂಧಿ ಸಬ್‌ಮಿಷನ್ ಯೋಜನೆಯಡಿ ರಾಯಚೂರು ಜಿಲ್ಲೆಯ ಸಿರವಾರ ತಾಲ್ಲೂಕಿನ ಕಲ್ಲೂರು ಮತ್ತು ಇತರೆ 1 ಗ್ರಾಮ ಹಾಗೂ ಅತ್ತನೂರು ಮತ್ತು ಇತರೆ 7 ಗ್ರಾಮಗಳಿಗೆ ಶುದ್ಧ ಕುಡಿಯುವ ನೀರನ್ನು ಒದಗಿಸಲು 2008-09 ರಲ್ಲಿ ಯೋಜನೆಯು ಮಂಜೂರಾಗಿತ್ತು. ಸದರಿ 2 ಯೋಜನೆಗಳನ್ನು ಪ್ಯಾಕೇಜ್ ಮಾಡಿ ಟೆಂಡರ್ ಕರೆದು, ಗುತ್ತಿಗೆದಾರರಾದ ಶ್ರೀ ಅಮರಖೇಡ್ ಎಸ್ ಎಮ್ ಇವರಿಗೆ ಟೆಂಡರ್ ಮುಖಾಂತರ ಕಾಮಗಾರಿಯನ್ನು ನಿರ್ವಹಿಸಲು ದಿನಾಂಕ:02.02.2009ರಂದು ಕಾರ್ಯಾದೇಶವನ್ನು ನೀಡಲಾಗಿತ್ತು. ಗುತ್ತಿಗೆದಾರರು ಕಾಮಗಾರಿಯನ್ನು ನಿರ್ವಹಿಸುವ ಸಮಯದಲ್ಲಿ ಕೆರೆ ನಿರ್ಮಾಣಕ್ಕೆಂದು ಅಂದಾಜು ಪತ್ರಿಕೆಯಲ್ಲಿ ಪರಿಗಣಿಸಿದ್ದ ಸ್ಥಳವು ಸೂಕ್ತವಾಗಿರದ ಕಾರಣದಿಂದ ಬೇರೆ ಸ್ಥಳವನ್ನು ಗುರುತಿಸಿ ಕಾಮಗಾರಿಯನ್ನು ನಿರ್ವಹಿಸಬೇಕಾಗಿತ್ತು.<br><br>ಅದರಂತೆ ಕೆರೆ ನಿರ್ಮಾಣಕ್ಕೆ ಸೂಕ್ತವಾದ ಬೇರೆ ಜಮೀನನ್ನು ದಿನಾಂಕ:09.02.2018ರಲ್ಲಿ ನೊಂದಣಿ ಮಾಡಿಕೊಳ್ಳಲಾಯಿತು. ತದನಂತರದಲ್ಲಿ ಕಾಮಗಾರಿಯನ್ನು ಪ್ರಾರಂಭಿಸಲು ಗುತ್ತಿಗೆದಾರರಿಗೆ ಹಲವಾರು ಬಾರಿ ಸೂಚಿಸಿ ನೋಟೀಸ್ ನೀಡಿದ್ದರೂ ಸಹ ಗುತ್ತಿಗೆದಾರರು ಯಾವುದೇ ಪ್ರತಿಕ್ರಿಯೆ ನೀಡದೇ ಇರುವ ಕಾರಣದಿಂದ Risk & Cost ಆಧಾರದ ಮೇಲೆ ದಿನಾಂಕ:26.02.2020ರಂದು ಟೆಂಡರ್ ನಿಯಮಾನುಸಾರ ರದ್ದುಗೊಳಿಸಿದ್ದು, ಭದ್ರತಾ ಠೇವಣಿ ಮುಟ್ಟುಗೋಲು ಹಾಕಿ ಕೊಳ್ಳಲು ಆದೇಶ ಮಾಡಲಾಗಿರುತ್ತದೆ ಹಾಗೂ ಸದರಿ ಯೋಜನೆಯ ಅನುಷ್ಠಾನವನ್ನು ಸ್ಥಗಿತಗೊಳಿಸಲಾಗಿರುತ್ತದೆ.<br><br>ಮುಂದುವರೆದು, ಮೇಲಿನ ಯೋಜನೆಯಿಂದ ಶುದ್ಧ ಕುಡಿಯುವ ನೀರನ್ನು ಒದಗಿಸಲು ಯೋಜಿಸಿದ್ದ |

| | |
|---|---|
| | ಎಲ್ಲಾ ಗ್ರಾಮಗಳಿಗೆ ಜಲ್ ಜೀವನ್ ಮಿಷನ್ ಯೋಜನೆಯಡಿ ಹಾಗೂ NABARD Infrastructur Development Assistance (NIDA)ನ ನೆರವಿನಿಂದ ರಾಯಚೂರು ಜಿಲ್ಲೆಯ ಎಲ್ಲಾ 1406 ಗ್ರಾಮೀಣ ಜನವಸತಿಗಳಿಗೆ ಹಾಗೂ 7 ನಗರ ಸ್ಥಳೀಯ ಸಂಸ್ಥೆಗಳಾದ ಮಾನ್ವಿ, ಮಸ್ಕಿ, ಕವಿತಾಳ, ತುರ್ವಿಹಾಳ, ಬಾಳಗನೂರು, ಸಿರವಾರ ಮತ್ತು ಹಟ್ಟಿ ಪಟ್ಟಣಕ್ಕೆ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಯಿಂದ ನೀರನ್ನು ಒದಗಿಸಲು ಯೋಜಿಸಲಾಗಿದ್ದು, ದಿನಾಂಕ:04.06.2022ರಂದು ಕಾರ್ಯಾದೇಶ ನೀಡಿದ್ದು, ಪ್ರಸ್ತುತ ಕಾಮಗಾರಿಯ ಪ್ರಗತಿ ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ. |
| ಆ) ಸದರಿ ಗ್ರಾಮಕ್ಕೆ ಜೆಜೆಎಂ ಹಾಗೂ ಇನ್ನಿತರೆ ಯಾವುದಾದರೂ ಯೋಜನೆಗಳಡಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆಯೇ; ಈ ಸದರಿ ಕಾಮಗಾರಿಗಳು ಯಾವ ಹಂತದಲ್ಲಿವೆ; ಮುಂದಿನ ಕ್ರಮಗಳೇನು; (ವಿವರಣೆ ನೀಡುವುದು) | ಅತ್ತನೂರು ಗ್ರಾಮಕ್ಕೆ (Upto Village OHTs) ರಾಯಚೂರು ಜಿಲ್ಲೆಯ DBOT ಯೋಜನೆಯಡಿ ಶುದ್ಧ ಕುಡಿಯುವ ನೀರನ್ನು ಒದಗಿಸಲು ಯೋಜಿಸಲಾಗಿದ್ದು, ದಿನಾಂಕ:04.06.2022ರಂದು ಕಾರ್ಯಾದೇಶ ನೀಡಿದ್ದು, ಪ್ರಸ್ತುತ ಸದರಿ ಕಾಮಗಾರಿಯು ಭೌತಿಕವಾಗಿ ಶೇ.55ರಷ್ಟು ಪ್ರಗತಿಯಾಗಿದ್ದು, ಡಿಸೆಂಬರ್ 2025ರೊಳಗೆ ಪೂರ್ಣಗೊಳಿಸಲು ಯೋಜಿಸಿದೆ. ಈ ಯೋಜನೆಯಿಂದ ಅತ್ತನೂರು ಗ್ರಾಮದ 423 ಮನೆಗಳಿಗೆ ನೀರು ಪೂರೈಸಲು ಯೋಜಿಸಲಾಗಿದೆ.<br>ಮುಂದುವರೆದು, ಅತ್ತನೂರು ಗ್ರಾಮದಲ್ಲಿನ 423 ಮನೆಗಳಿಗೆ ಕಾರ್ಯಾತ್ಮಕ ನಳ ನೀರು ಸಂಪರ್ಕ ಒದಗಿಸುವ ಕಾಮಗಾರಿಯನ್ನೂ ಸಹ ರೂ.130.00ಲಕ್ಷಗಳ ಅಂದಾಜು ಮೊತ್ತದಲ್ಲಿ ಕೈಗೆತ್ತಿಕೊಂಡಿದ್ದು, ಪ್ರಸ್ತುತ ಕಾಮಗಾರಿಯು ಶೇ.55ರಷ್ಟು ಭೌತಿಕ ಪ್ರಗತಿಯಾಗಿರುತ್ತದೆ. |
| ಇ) ಒಂದೇ ಗ್ರಾಮದ ಒಂದೇ ವಸತಿ ಪ್ರದೇಶಕ್ಕೆ ಒಂದಕ್ಕಿಂತ ಹೆಚ್ಚು ಯೋಜನೆಗಳಡಿ (ಬಹುಗ್ರಾಮ ಕುಡಿಯುವ ನೀರು ಯೋಜನೆ ಮತ್ತು ಜೆಜೆಎಂ ಆಡಿಯಲ್ಲಿ) ಕಾಮಗಾರಿಗೆ ಅನುಮೋದನೆ ನೀಡಲು ಕಾರಣವೇನು: ಸದರಿ ಕಾಮಗಾರಿಗಳು ಯಶಸ್ವಿಯಾಗಿದೆಯೇ, (ವಿವರ ನೀಡುವುದು) | ರಾಜೀವ್ ಗಾಂಧಿ ಸಬ್‌ಮಿಷನ್ ಯೋಜನೆಯಡಿ ರಾಯಚೂರು ಜಿಲ್ಲೆಯ ಸಿರವಾರ ತಾಲ್ಲೂಕಿನ ಕಲ್ಲೂರು ಮತ್ತು ಇತರೆ 1 ಗ್ರಾಮ ಹಾಗೂ ಅತ್ತನೂರು ಮತ್ತು ಇತರೆ 7 ಗ್ರಾಮಗಳಿಗೆ ಶುದ್ಧ ಕುಡಿಯುವ ನೀರನ್ನು ಒದಗಿಸುವ ಯೋಜನೆಯ ಕೆರೆ ನಿರ್ಮಾಣಕ್ಕೆ ಅವಶ್ಯವಿರುವ ಖಾಸಗಿ ಜಮೀನನ್ನು ನೊಂದಣಿ ಮಾಡಿಕೊಳ್ಳುವಲ್ಲಿ ವಿಳಂಬವಾಗಿದ್ದು, ತದನಂತರ ಗುತ್ತಿಗೆದಾರರು ಇಲಾಖೆಯ ಯಾವುದೇ ಪತ್ರ ವ್ಯವಹಾರ ಹಾಗೂ ನೋಟೀಸ್‌ಗಳಿಗೆ ಸ್ಪಂದಿಸದೇ ಇದ್ದ ಕಾರಣ Risk & Cost ಆಧಾರದ ಮೇಲೆ ಟೆಂಡರ್ ರದ್ದುಗೊಳಿಸಿರುವ ಕಾರಣದಿಂದ ಕಾಮಗಾರಿಯು ಸ್ಥಗಿತಗೊಂಡಿರುತ್ತದೆ.<br>ಈ ಸಮಯದಲ್ಲಿ ರಾಯಚೂರು ಜಿಲ್ಲೆಯ ಎಲ್ಲಾ 1406 ಗ್ರಾಮೀಣ ಜನವಸತಿಗಳಿಗೆ ಶುದ್ಧ ಕುಡಿಯುವ ನೀರನ್ನು ಒದಗಿಸಲು DBOT ಆಧಾರಿತ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯನ್ನು ಕೈಗೆತ್ತಿಕೊಳ್ಳುವ |

| | |
|---|---|
| | ಪ್ರಸ್ತಾಪನೆಯು ಸರ್ಕಾರದ ಮುಂದೆ ಇದ್ದುದರಿಂದ ರಾಜೀವ್ ಗಾಂಧಿ ಸಬ್‌ಮಿಷನ್ ಯೋಜನೆಯಡಿ ಕೈಗೆತ್ತಿಕೊಂಡಿದ್ದ ಕಲ್ಲೂರು ಮತ್ತು ಇತರೆ 1 ಗ್ರಾಮ ಹಾಗೂ ಅತ್ತನೂರು ಮತ್ತು ಇತರೆ 7 ಗ್ರಾಮಗಳಿಗೆ ಶುದ್ಧ ಕುಡಿಯುವ ನೀರನ್ನು ಒದಗಿಸುವ ಯೋಜನೆಯ ಅನುಷ್ಠಾನವನ್ನು ಪುನಃ ಕೈಗೆತ್ತಿಕೊಂಡಿರುವುದಿಲ್ಲ. |
| ಈ) ಸದರಿ ಗ್ರಾಮದ ಕುಡಿಯುವ ನೀರಿಗಾಗಿ ಉದ್ದೇಶಿತ ಯೋಜನೆಗಳಿಗೆ ನಿಗದಿಪಡಿಸಿದ ಅನುದಾನದ ವಿವರ ಮತ್ತು ಖರ್ಚಾದ ಹಣದ ಹಾಗೂ ಕಾಮಗಾರಿಗಳಿಗೆ ನಿಗದಿ ಪಡಿಸಿದ ಸಮಯ ಎಷ್ಟು; (ವಿವರಣೆ ನೀಡುವುದು) | ಅತ್ತನೂರು ಗ್ರಾಮದಲ್ಲಿ ಕುಡಿಯುವ ನೀರಿಗಾಗಿ ಉದ್ದೇಶಿತ ಯೋಜನೆಗಳಿಗೆ ನಿಗದಿಪಡಿಸಿದ ಅನುದಾನ, ಖರ್ಚಾದ ಹಣದ ವಿವರ ಹಾಗೂ ಕಾಮಗಾರಿಗಳಿಗೆ ನಿಗದಿ ಪಡಿಸಿದ ಸಮಯ<br><br>ಅ) ರಾಜೀವ್ ಗಾಂಧಿ ಸಬ್‌ಮಿಷನ್ ಯೋಜನೆಯಡಿ ರಾಯಚೂರು ಜಿಲ್ಲೆಯ ಸಿರವಾರ ತಾಲ್ಲೂಕಿನ ಕಲ್ಲೂರು ಮತ್ತು ಇತರೆ 1 ಗ್ರಾಮ ಹಾಗೂ ಅತ್ತನೂರು ಮತ್ತು ಇತರೆ 7 ಗ್ರಾಮಗಳಿಗೆ ಶುದ್ಧ ಕುಡಿಯುವ ನೀರಿನ ಯೋಜನೆ:<br>ನಿಗಧಿಪಡಿಸಿದ ಅನುದಾನ: ರೂ.953.00ಲಕ್ಷಗಳು<br>ಖರ್ಚಾದ ಮೊತ್ತ: ರೂ.416.53ಲಕ್ಷಗಳು<br>ನಿಗಧಿಪಡಿಸಿದ ಸಮಯ:11 ತಿಂಗಳುಗಳು.<br><br>ಆ) ರಾಯಚೂರು ಜಿಲೆಯ DBOT ಯೋಜನೆ:<br>ನಿಗಧಿಪಡಿಸಿದ ಅನುದಾನ: ರೂ.2978.00 ಕೋಟಿಗಳು.<br>ಖರ್ಚಾದ ಮೊತ್ತ: ರೂ.1212.67ಕೋಟಿಗಳು.<br>ನಿಗಧಿಪಡಿಸಿದ ಸಮಯ:30 ತಿಂಗಳುಗಳು.<br><br>ಇ)ಅತ್ತನೂರು ಗ್ರಾಮದ 423 ಮನೆಗಳಿಗೆ ಕಾರ್ಯಾತ್ಮಕ ನಳ ನೀರು ಸಂಪರ್ಕ ಒದಗಿಸುವ ಯೋಜನೆ:<br>ನಿಗಧಿಪಡಿಸಿದ ಅನುದಾನ: ರೂ.130.00ಲಕ್ಷಗಳು<br>ಖರ್ಚಾದ ಮೊತ್ತ: ರೂ.65.84ಲಕ್ಷಗಳು<br>ನಿಗಧಿಪಡಿಸಿದ ಸಮಯ:6 ತಿಂಗಳುಗಳು. |
| ಉ) ಎಂವಿಎಸ್ (ಬಹುಗ್ರಾಮ ಕುಡಿಯುವ ನೀರಿನ) ಯೋಜನೆಯಡಿ ನಿರ್ಮಿಸಲು ಕೈಗೆತ್ತಿಕೊಂಡಿರುವ ಕೆರೆ ನಿರ್ಮಾಣ ಕಾರ್ಯ ಪೂರ್ಣಗೊಳಿಸದೆ ಇರಲು ಕಾರಣವೇನು; ಸದರಿ ಕೆರೆಯನ್ನು ಪೂರ್ಣಗೊಳಿಸಿ ಅತನೂರು ಗ್ರಾಮಕ್ಕೆ ಶಾಶ್ವತ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸುವಲ್ಲಿ ಇರುವ ಸಮಸ್ಯೆಗಳೇನು; ಯಾವ ಕಾಲಮಿತಿಯಲ್ಲಿ ಈ ಸಮಸ್ಯೆಯನ್ನು ಬಗೆಹರಿಸಲಾಗುವುದು? | ರಾಜೀವ್ ಗಾಂಧಿ ಸಬ್‌ಮಿಷನ್ ಯೋಜನೆಯಡಿ ರಾಯಚೂರು ಜಿಲ್ಲೆಯ ಸಿರವಾರ ತಾಲ್ಲೂಕಿನ ಅತ್ತನೂರು ಹಾಗೂ ಇತರೆ 7 ಗ್ರಾಮಗಳಿಗೆ ಶುದ್ಧ ಕುಡಿಯುವ ನೀರನ್ನು ಒದಗಿಸುವ ಯೋಜನೆಯನ್ನು ಗುತ್ತಿಗೆದಾರರು ಕಾಮಗಾರಿಯನ್ನು ನಿರ್ವಹಿಸುವ ಸಮಯದಲ್ಲಿ ಕೆರೆ ನಿರ್ಮಾಣಕ್ಕೆಂದು ಅಂದಾಜು ಪತ್ರಿಕೆಯಲ್ಲಿ ಪರಿಗಣಿಸಿದ್ದ ಸ್ಥಳವು ತಾಂತ್ರಿಕವಾಗಿ ಸೂಕ್ತವಾಗಿರದ ಕಾರಣದಿಂದ ಬೇರೆ ಸ್ಥಳವನ್ನು ಗುರುತಿಸಿ ಕಾಮಗಾರಿಯನ್ನು ನಿರ್ವಹಿಸಬೇಕಾಗಿತ್ತು.<br><br>ಆದರೆ ಕೆರೆ ನಿರ್ಮಾಣಕ್ಕೆ ಅವಶ್ಯವಾದ ಖಾಸಗಿ ಜಮೀನನ್ನು ನೊಂದಣಿ ಮಾಡಿಕೊಳ್ಳುವಲ್ಲಿ ವಿಳಂಬವಾದ ಕಾರಣದಿಂದ ದಿನಾಂಕ:09.02.2018ರಲ್ಲಿ |

| | |
|---|---|
| | ನೊಂದಣಿ ಮಾಡಿಕೊಳ್ಳಲಾಯಿತು. ತದನಂತರದಲ್ಲಿ ಕಾಮಗಾರಿಯನ್ನು ಪ್ರಾರಂಭಿಸಲು ಗುತ್ತಿಗೆದಾರರಿಗೆ ಹಲವಾರು ಬಾರಿ ಸೂಚಿಸಿ ನೋಟೀಸ್ ನೀಡಿದರೂ ಸಹ ಗುತ್ತಿಗೆದಾರರು ಯಾವುದೇ ಪ್ರತಿಕ್ರಿಯೆ ನೀಡದೇ ಇರುವ ಕಾರಣದಿಂದ Risk & Cost ಆಧಾರದ ಮೇಲೆ ದಿನಾಂಕ:26.02.2020ರಂದು ಟೆಂಡರ್ ನಿಯಮಾನುಸಾರ ರದ್ದುಗೊಳಿಸಲಾಗಿರುತ್ತದೆ.<br><br>ಪ್ರಸ್ತುತ ರಾಯಚೂರು ಜಿಲ್ಲೆಯ DBOT ಯೋಜನೆಯಡಿ ರಾಯಚೂರು ಜಿಲ್ಲೆಯ ಎಲ್ಲಾ 810 ಗ್ರಾಮಗಳನ್ನು ಪರಿಗಣಿಸಿದ್ದು, ಯೋಜನೆಯು ಶೇ.55ರಷ್ಟು ಪ್ರಗತಿಯಲ್ಲಿದ್ದು, ಡಿಸೆಂಬರ್ 2025ರೊಳಗೆ ಪೂರ್ಣಗೊಳಿಸಿ ರಾಯಚೂರು ಜಿಲ್ಲೆಯ ಎಲ್ಲಾ ಗ್ರಾಮೀಣ ಜನವಸತಿಗಳಿಗೆ ಶುದ್ಧ ಕುಡಿಯುವ ನೀರನ್ನು ಒದಗಿಸಲು ಯೋಜಿಸಿದೆ. ಆದುದರಿಂದ ಈಗಾಗಲೇ Rescend ಆಗಿರುವ ಯೋಜನೆಯನ್ನು ಪುನಃ ಕೈಗೆತ್ತಿಕೊಳ್ಳುವ ಸಂದರ್ಭ ಉದ್ಭವಿಸುವುದಿಲ್ಲ. |

ಸಂಖ್ಯೆ:ಗ್ರಾಕುನೀ&ನೈಇ/ಮು.ಇಂ/ತಾಂ/174/2024

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಹಾಗೂ
ಮಾಹಿತಿ ತಂತ್ರಜ್ಞಾನ ಮತ್ತು
ಜೈವಿಕ ತಂತ್ರಜ್ಞಾನ ಸಚಿವರು.